ದಿನಾಂಕ: 10.01.2024 ರಂದು ಪ್ರಮಾಣ ವಚನ ಬೋಧಿಸಲಾಗಿದೆ

**ಪಾಟೀ ಸವಾಲು: ಆರೋಪಿ ಪರವಾಗಿ ಎಲ್ ಎ ಡಿ ಸಿ ವಕೀಲರಾದ ಶ್ರೀ ಬಿ ಕೆ ಜಿ ರವರಿಂದ:**

1). ಡಿಪ್ಲೋಮಾ ಇನ್ ಕಂಪ್ಯೂಟರ್ ಸೈನ್ಸ್ ಕೋರ್ಸ್ incomplete ಆಗಿದೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಸರ್ಟಿಫಿಕೇಟ್ ನನ್ನ ಬಳಿ ಇಲ್ಲ ಎಂದರೆ ಸರಿ. ನಾನು ಮಂಡ್ಯದಲ್ಲಿ ಸಿಸಿ ಟಿವಿ ಎಲೆಕ್ಟ್ರಾನಿಕ್ಸ್ ಅಂಗಡಿಯನ್ನು ಶುರು ಮಾಡಿದ ದಿನಾಂಕ, ತಿಂಗಳು ಹಾಗೂ ವರುಷ ನೆನಪಿಲ್ಲ. ನನ್ನ ಅಂಗಡಿಗೆ "A to Z security solutions" ಎಂಬ ಹೆಸರನ್ನು ಇಟ್ಟಿದ್ದೇನೆ. ನಾನು ನನ್ನ ಅಂಗಡಿಗೆ ನಗರಸಭೆ ಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದೇನೆ. ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಸಂಬಂಧಪಟ್ಟ information technology ಇಲಾಖೆಯಿಂದ ಪರವಾನಿಗೆಯನ್ನು ಪಡೆದುಕೊಂಡಿಲ್ಲ. ಚಾಸಾ.15 ರವರ ಬಣ್ಣದ ಅಂಗಡಿಗೆ ಸಿಸಿ.ಟಿವಿ ಕ್ಯಾಮರಾವನ್ನು ಜನವರಿ-2021 ರಲ್ಲಿ ಅಳವಡಿಸಿಕೊಟ್ಟಿದ್ದೆನು, ದಿನಾಂಕ ನೆನಪಿಲ್ಲ. ನಾನು ಸುಮಾರು 50 ರಿಂದ 60 ಅಂಗಡಿಗಳಿಗೆ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿಕೊಟ್ಟಿರುತ್ತೇನೆ. ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿರುವುದಕ್ಕೆ ಸಂಬಂಧಪಟ್ಟ ಇಲಾಖೆಗೆ ಮಾಹಿತಿಯನ್ನು ಕಳುಹಿಸಬೇಕಾಗಿಲ್ಲ. ಯಾವ ಯಾವ ದಿನಾಂಕದಲ್ಲಿ ಮತ್ತು ಯಾರು ಯಾರಿಗೆ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿಕೊಟ್ಟಿದ್ದೇನೆ ಎನ್ನುವುದರ ಬಗ್ಗೆ ನನ್ನ ಅಂಗಡಿಯಲ್ಲಿ ಮಾಹಿತಿಯನ್ನು ಇಟ್ಟುಕೊಂಡಿಲ್ಲ. ಗ್ರಾಹಕರು ಬಾಯಿ

ಮಾತಿನಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿಕೊಳ್ಳುವುದಕ್ಕೆ ಕೇಳುತ್ತಾರೆ. ಗ್ರಾಹಕರು, ಅವರ ಹೆಸರು, ವಿಳಾಸ, ಸಂಬಂಧಪಟ್ಟ ಮಾಹಿತಿಯನ್ನು ನಮ್ಮ ಅಂಗಡಿಗೆ ಬರವಣಿಗೆಯಲ್ಲಿ ಕೊಡುವುದಿಲ್ಲ. ಸಿಸಿ ಟಿವಿ ಕ್ಯಾಮರಾಗಳನ್ನು ಗ್ರಾಹಕರಿಗೆ ಸರಬರಾಜು ಮಾಡಿರುವುದಕ್ಕೆ ದಾಖಲೆಗಳನ್ನು ನಮ್ಮ ಅಂಗಡಿಯಲ್ಲಿ ಇಟ್ಟುಕೊಂಡಿಲ್ಲ. ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಬೇಕಾದರೆ, ಸಂಬಂಧಪಟ್ಟ ಸಾಮಗ್ರಿಗಳಾದ ಡಿವಿಆರ್, ಕ್ಯಾಮರಾ, hard disk, connector, cable ಗಳನ್ನು ಅಂಗಡಿಯಿಂದ ಸರಬರಾಜು ಮಾಡಲಾಗುತ್ತದೆ. ಮೇಲೆ ಹೇಳಿದ ಸಾಮಾಗ್ರಿಗಳನ್ನು ನಾನು ನಮ್ಮ ಅಂಗಡಿ ಹೆಸರಿಗೆ ಕೊಂಡು ಕೊಂಡಿರುತ್ತೇನೆ.

2) ದಿಃ 28.04.2021 ರಂದು ಚಾಸಾ 2 ಕಾಸಿಫ್ ರವರು, ನನಗೆ ಫೋನ್ ಮಾಡಿದ ಅವರ ಫೋನ್ ನಂಬರ್ ಗೊತ್ತಿಲ್ಲ. ಚಾಸಾ.2 ರವರು, ಫೋನ್ ನಲ್ಲಿ ಪೈಂಟ್ ಅಂಗಡಿಯ ಹತ್ತಿರ ಬಾ ಎಂದು ನನಗೆ ಹೇಳಿದ್ದರು. ಚಾಸಾ.2 ರವರು, ಬಣ್ಣದ ಅಂಗಡಿಯನ್ನು ಇಟ್ಟುಕೊಂಡಿಲ್ಲ. ನಾನು ಚಾಸಾ.2 ರವರ ಅಂಗಡಿಗೆ ಸಿಸಿ ಟಿ ವಿ ಕ್ಯಾಮರಾವನ್ನು ಹಾಕಿಲ್ಲ ಎಂದರೆ ಸರಿ. "ಚಾಸಾ.2 ರವರು, ನನಗೆ ಫೋನ್ ಮಾಡಿ ಪೈಂಟ್ ಅಂಗಡಿಯ ಹತ್ತಿರ ಬಾ" ಎಂದು ಹೇಳಿದ್ದ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರು ಕಾಸೀಫ್, ನನಗೆ ಫೋನ್ ಮಾಡಿ ಕರೆದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.15 ಆಸೀಫ್ ಪಾಷ ರವರ ಬಣ್ಣದ ಅಂಗಡಿ ಹತ್ತಿರ ಪೊಲೀಸರೇ ನನ್ನನ್ನು ಕರೆದುಕೊಂಡು

ಹೋಗಿದ್ದರು ಎಂದರೆ ಸರಿಯಲ್ಲ. ಡಿವಿ ಆರ್ ನ್ನು password ಹಾಕಿ ನಾನು open ಮಾಡಿದೆನು, ಕೀ ಹಾಕಿ open ಮಾಡಿಲ್ಲ. password ಅಂಗಡಿ ಮಾಲಿಕರು ಮತ್ತು technician ರವರ ಬಳಿ ಇರುತ್ತದೆ.

3) ನಾನು ಅಂಗಡಿಗೆ ಹೋಗುವ ಮೊದಲು, ಅಂಗಡಿ ಮಾಲಿಕರು ಡಿವಿಆರ್ password ನ್ನು ಬಳಸಿಕೊಂಡು ಅಂಗಡಿಯಲ್ಲಿ ಇದ್ದ ಸಿಸಿ ಕ್ಯಾಮರಾವನ್ನು ತೆರೆದು ನೋಡಿರಲಿಲ್ಲ. ಚಾಸಾ 15 ರವರ ಅಂಗಡಿಗೆ ನಾನು ಸಿ.ಸಿ. ಟಿವಿಯನ್ನು ಅಳವಡಿಸಿದ ದಿನಾಂಕದಿಂದ 27 ರ ರಾತ್ರಿಯವರೆಗೆ ಏನೇನು ದೃಶ್ಯಾವಳಿ ಸೆರೆಯಾಗಿತ್ತು ಎನ್ನುವುದನ್ನು ನಾನು ನೋಡಲಿಲ್ಲ. ದಿಃ27 ನೇ ತಾರೀಖಿನ ಸಿಸಿ ಟಿವಿಯ ದೃಶ್ಯಾವಳಿಯನ್ನು ನೋಡಿ ಪರಿಶೀಲನೆ ಮಾಡಬೇಕು ಎಂದು ನನಗೆ ಅಂಗಡಿ ಮಾಲಿಕರು ಹೇಳಿದರು. ನೀವು ನಿಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ " ಆಗ ಕಲ್ಲು ಹಾಕಿ ಕೊಲೆ ಮಾಡಿದ ದೃಶ್ಯಾವಳಿ ಸೆರೆಯಾಗಿದೆ ಎಂದು ಹೇಳಿದ್ದೀರಿ, ಅದು ಕೊಲೆ ಎಂದು ನಿಮಗೇ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಸಿ.ಸಿ. ಟಿವಿ ಕ್ಯಾಮಾರಾದಲ್ಲಿ ದೃಶ್ಯಾವಳಿಯನ್ನು ನೋಡಿದ ಮೇಲೆ ಅದು ಕೊಲೆ ಎಂದು ಗೊತ್ತಾಯಿತು" ಎಂದು ಉತ್ತರಿಸುತ್ತಾರೆ. ಕೊಲೆಯಾದಂತಹ ವ್ಯಕ್ತಿಯನ್ನು ಮತ್ತು ಕೊಲೆ ಮಾಡಿದ ವ್ಯಕ್ತಿಯನ್ನು ನಾನು ಈ ಮೊದಲು ನೋಡಿರಲಿಲ್ಲ ಎಂದರೆ ಸರಿ. ಕೊಲೆಯಾದಂತಹ ವ್ಯಕ್ತಿಯನ್ನು ಯಾರು ಕೊಲೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸಿಸಿ ಟಿವಿ ಕ್ಯಾಮರಾದಲ್ಲಿ ಕೊಲೆ ಮಾಡಿದ ವ್ಯಕ್ತಿಯ ಸೆರೆಯಾಗಿತ್ತು ಎಂದು ಉತ್ತರಿಸುತ್ತಾರೆ.

ಕೊಲೆ ಮಾಡಿದ ವ್ಯಕ್ತಿ ಯಾರು ಎಂದು ಗೊತ್ತಾಯಿತಾ ಎಂಬ ಪ್ರಶ್ನೆಗೆ ಸಾಕ್ಷಿಯು ಸಿಸಿ ಕ್ಯಾಮಾರಾದಲ್ಲಿ ಸೆರೆಯಾಗಿದ್ದ ವ್ಯಕ್ತಿ ಕೊಲೆ ಮಾಡಿದ್ದನು ಎಂದು ಉತ್ತರಿಸುತ್ತಾರೆ.

4) ದೃಶ್ಯಾವಳಿಯಲ್ಲಿ ನೋಡಿದಂತಹ ವ್ಯಕ್ತಿಯನ್ನು ನಿಖರವಾಗಿ ನಾವು ನೇರವಾಗಿ ನೊಡದೇ ಇದ್ದಂತಹ ಸಂದರ್ಭದಲ್ಲಿ ಅವರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ದೃಶ್ಯಾವಳಿಯನ್ನು ನೋಡಿ, ಚೀಲದ ಒಳಗಡೆ ಒಂದು ದಿಂಡುಗಲ್ಲು ಇತ್ತು ಎಂದು ಹೇಳಿದ್ದೇನೆ, ಆದರೆ ಚೀಲದಲ್ಲಿ ಏನು ಇದೆ ಎನ್ನುವುದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸಾಕ್ಷಿಯು ಚೀಲದಲ್ಲಿ ದಿಂಡು ಗಲ್ಲು ಇತ್ತು ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ, ಚೀಲದಿಂದ ಆಚೆ ತೆಗೆದಿದ್ದ ದಿಂಡು ಗಲ್ಲನ್ನು ನಾನು ನೋಡಿದ್ದೆನು ಎಂದು. ಆರೋಪಿಯು ಸದರಿ ಚೀಲದಲ್ಲಿ ದಿಂಡು ಗಲ್ಲನ್ನು ಹಾಕಿಕೊಂಡು ತಂದಿದ್ದು ಸಹ ಸಿಸಿ ಟಿ.ವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ದಿಂಡು ಗಲ್ಲನ್ನು ತಂದಿದ್ದ ವ್ಯಕ್ತಿಯು, ನೇರವಾಗಿ ಅದನ್ನು, ಮಲಗಿಕೊಂಡಿದ್ದ ವ್ಯಕ್ತಿಯ ಮೇಲೆ ಹಾಕಿದ್ದನ್ನು, ನೀವು ನೋಡಿದ್ದರಾ ಎಂದರೆ ಸಾಕ್ಷಿಯು, ಈ ದೃಶ್ಯಾವಳಿ ಸಿಸಿ ಟಿ.ವಿ. ಕ್ಯಾಮರಾದಲ್ಲಿ ಸೆರೆಯಾಗಿದ್ದನ್ನು ನಾನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. "ದಿಂಡು ಗಲ್ಲನ್ನು ತೆಗೆದು ಆರೋಪಿ ಮಲಗಿಕೊಂಡಿದ್ದ ವ್ಯಕ್ತಿಯ ಮೇಲೆ ಹಾಕಿದನು, ನಂತರ ಹೊರಟು ಹೋದನು, ಸ್ವಲ್ಪ ಸಮಯದ ನಂತರ ಮತ್ತೆ ವಾಪಸ್ಸು ಬಂದು, ಮಲಗಿದ್ದ

ವ್ಯಕ್ತಿ ಬದುಕಿರುವುದನ್ನು ಕಂಡು ಮತ್ತೆ ಅದೇ ದಿಂಡುಗಲ್ಲನ್ನು ಆತನ ಮೇಲೆ ಮತ್ತೆ ಹಾಕಿದನು. ಸತ್ತು ಹೋಗಿದ್ದ ವ್ಯಕ್ತಿಯ ಜೇಬನ್ನು ಆರೋಪಿ ಚೆಕ್ ಮಾಡಿದನು, ಜೇಬಿನಲ್ಲಿ ಏನು ಸಿಕ್ಕಿತ್ತು ಅನ್ನುವುದು ದೃಶ್ಯಾವಳಿಯಲ್ಲಿ ಕಾಣಿಸಲಿಲ್ಲ, ಆರೋಪಿ ಅದನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ಹೊರಟು ಹೋದನು" ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನೀವು ಸಿಸಿ ಕ್ಯಾಮರಾದಲ್ಲಿ ನೋಡಿದಂತಹ ಎಲ್ಲಾ ದೃಶ್ಯಾವಳಿಗಳು, ವಿದ್ಯುತ್ ಶಕ್ತಿ ಸರಬರಾಜಿನ ಅಡಚಣೆ ಇಲ್ಲದೇ ( power cut), ಸೆರೆಯಾಗಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಯುಪಿಎಸ್ ಅಳವಡಿಸಿರುವುದರಿಂದ, ಯಾವುದೇ power cut ಅಡಚಣೆ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಯುಪಿಎಸ್ ನ್ನು ಯಾರು ಅಳವಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಅಂಗಡಿಗೆ ಯುಪಿಎಸ್ ವ್ಯವಸ್ಥೆ ಇರಲಿಲ್ಲ ಎಂದರೆ ಸರಿಯಲ್ಲ.

5) ನಾನು ಒಂದು pen drive ನ್ನು ತೆಗೆದುಕೊಂಡು ಹೋಗಿದ್ದೆನು. ಸಿಸಿ ಟಿ.ವಿ ದೃಶ್ಯಾವಳಿಗಳನ್ನು ಈ pen drive ಗೆ ಕಾಪಿ ಮಾಡಿಕೊಂಡು, ನಂತರ ಈ pen drive ನಿಂದ ಇನ್ನೆರಡು pen drive ಗಳಿಗೆ ಮತ್ತು ಎರಡು ಡಿವಿಡಿ ಗಳಿಗೆ ಕಾಪಿ ಮಾಡಿಕೊಂಡೆನು. ಈ ರೀತಿ ಬರ್ನ್ ಮಾಡಿ ಹಾಕುವಾಗ ದೃಶ್ಯಾವಳಿಗಳನ್ನು ತಿರುಚಬಹುದು (manipulation) ಮಾಡಬಹುದು ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ಅವರ ಕೆಸಿನ ಅನುಕೂಲಕ್ಕೆ ತಕ್ಕಂತೆ ನಾನು

ಸಿಸಿ ಟಿ.ವಿ ದೃಶ್ಯಾವಳಿಗಳನ್ನು ಬರ್ನ್ ಮಾಡ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಸಂಬಂಧ ಇಲ್ಲದೇ ಇದ್ದರೂ ಸಹ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ಇಲಾಖೆಯಿಂದ ನಾನು ಪರವಾನಿಗೆಯನ್ನು ತೆಗೆದುಕೊಳ್ಳದೇ ಇರುವ ಕಾರಣ, ನಾನು ಕಲಂ 65(B) Indian Evidence Act ಅಡಿಯಲ್ಲಿ ಪ್ರಮಾಣ ಪತ್ರವನ್ನು ಕೊಡಲು ಅರ್ಹನಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು
ಮಂಡ್ಯ.